**ರೇಷ್ಮೆಗೆ ತಗಲುವ ಊಜಿ ನೊಣ ನಿವಾರಣೆ**

991 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ರೇಷ್ಮೆಗೆ ತಗಲುವ ಊಜಿನೊಣ ನಿವಾರಣೆಗೆ ಸರ್ಕಾರ ಏನು ಕ್ರಮಕೈಗೊಂಡಿದೆ?*

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :

1. ಹುಳು ಸಾಕುವ ಕೊಠಡಿಗಳಲ್ಲಿ ನೈಲಾನ್ ಬಲೆಯನ್ನು ಉಪಯೋಗಿಸುವುದು.
2. ಹುಳು ಸಾಕಣೆ ತಟ್ಟೆಗಳನ್ನು ನೈಲಾನ್ ಬಲೆಗಳಿಂದ ಮುಚ್ಚುವುದು.
3. ಹುಳು ಸಾಕಾಣಿಕೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿ ಅಳವಡಿಸುವುದು.
4. ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಊಜಿನೊಣದ ಮೆಗಾಟ್ಸ್‌ಗಳನ್ನು ಸಂಗ್ರಹಿಸಿ ಬಿಸಿ ನೀರಿನಲ್ಲಿ ಸಾಯಿಸುವುದು.
5. ಊಜಿ ನೊಣದ ಮೆಗಾಟ್‌ಗಳು ಇರತಕ್ಕಂಥ ಹುಳುಗಳನ್ನು ಆಯ್ದು ಸಾಯಿಸುವುದು.
6. ಊಜಿ ಸೈಡ್ ಮತ್ತು ಚೈನಾ ಕ್ಲೇಗಳನ್ನು ಸಹ ರೇಷ್ಮೆ ಹುಳುಗಳ ಮೇಲೆ ಚುಮುಕಿಸಲು ತಿಳುವಳಿಕೆ ಕೊಡಲಾಗುತ್ತಿದೆ.

**ಸರ್ಕಾರಿ ನೌಕರರನ್ನು ವರ್ಗಾವರ್ಗಿ ಮಾಡುವ ಬಗ್ಗೆ ನೀತಿ ನಿಯಮಗಳು**

987 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

*ಅ) ಸರ್ಕಾರಿ ನೌಕರರನ್ನು ವರ್ಗಾವರ್ಗಿ ಮಾಡುವ ಬಗ್ಗೆ ಏನಾದರೂ ನೀತಿ ನಿಯಮಗಳನ್ನು ಹಾಕಿಕೊಂಡಿದೆಯೇ?*

*ಆ) ವರ್ಷದ ಮಧ್ಯದಲ್ಲಿ ಯಾರನ್ನು ಬೇಕಾದರೂ ವರ್ಗ ಮಾಡಬಹುದೇ ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಮಾಡಲಾಗುವುದು.

**ಕನ್ನಡ ಚಿತ್ರಗಳ ಬೆಳವಣಿಗೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮ**

988 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಕನ್ನಡ ಚಿತ್ರಗಳ ಬೆಳವಣಿಗೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

*ಆ) ಎಷ್ಟು ಕನ್ನಡ ಚಲನಚಿತ್ರಗಳಿಗೆ ಇಮವರೆವಿಗೆ ಸರ್ಕಾರ ಸಹಾಯಧನ ನೀಡದೆ, ಬಾಕಿ ಉಳಿಸಿಕೊಂಡಿದೆ ?*

*ಇ) ಕಡ್ಡಾಯ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಇದುವರೆಗೆ ಏತಕ್ಕೆ ಕಾನೂನು ಮಾಡಿಲ್ಲ ?*

*ಈ) ಡಬ್ಬಿಂಗ್ ಕನ್ನಡ ಚಿತ್ರಗಳಿಗೆ ಸಹಾಯಧನ ನಿಲ್ಲಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೆ?*

*ಉ) ಕನ್ನಡ ಸಾಹಿತ್ಯ, ಸಂಸ್ಕೃತಿ ಭಾಷೆಗೆ ಅಗೌರವ ತರುವ ಚಿತ್ರಗಳಿಗೆ ಸಹಾಯ ಧನ ನಿಲ್ಲಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಯ ತುಳು, ಕೊಡವಾ ಮತ್ತು ಕೊಂಕಣಿ ಚಲನಚಿತ್ರಗಳಿಗೆ ಈ ಕೆಳಕಂಡ ಸೌಲಭ್ಯ ನೀಡಲಾಗುತ್ತಿದೆ.

1. ವರ್ಣಚಿತ್ರಗಳಿಗೆ 3.50 ಲಕ್ಷ ರೂ. ಗಳ ಸಹಾಯಧನ.
2. ಶೇಕಡಾ 50ರ ಮನರಂಜನಾ ತೆರಿಗೆ ವಿನಾಯಿತಿ.
3. ಚಲನಚಿತ್ರ ನಟನಟಿಯರು, ತಂತ್ರಜ್ಞರುಗಳಿಗೆ ರಾಜ್ಯ ಚಲನಚಿತ್ರ ಪ್ರಶಸ್ತಿ ನೀಡಲಾಗುತ್ತಿದೆ.
4. ಚಲನಚಿತ್ರ ರಂಗದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದತಂಹ ಗಣ್ಯವ್ಯಕ್ತಿಗಳಿಗೆ ಪುಟ್ಟಣ್ಣ ಕಣಗಾಲ್ ರಾಜ್ಯ ಪ್ರಶಸ್ತಿ ನೀಡಲಾಗುತ್ತಿದೆ.
5. ಪ್ರಶಸ್ತಿ ವಿಜೇತ ಚಲನಚಿತ್ರಕ್ಕೆ ಒಂದು ವರ್ಷ ಕಾಲ ಶೇಕಡಾ 100ರ ಮನರಂಜನಾ ತೆರಿಗೆ ವಿನಾಯಿತಿ ನೀಡಾಗುತ್ತಿದೆ.
6. ಪ್ರಶಸ್ತಿ ವಿಜೇತ ಚಲನ ಚಿತ್ರಗಳನ್ನು ರಾಜ್ಯ ಚಲನಚಿತ್ರ ಬಂಡಾರದಲ್ಲಿ ಶೇಖರಿಸಿಡಲಾಗುತ್ತಿದೆ.
7. 15 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರುವ ಕಡೆ ಪ್ರದರ್ಶನ ತೆರಿಗೆ ಸಂಪೂರ್ಣ ವಿನಾಯಿತಿ ನೀಡಿದೆ.
8. ಉತ್ತಮ ಮಕ್ಕಳ ಚಿತ್ರಕ್ಕೆ ಪ್ರಶಸ್ತಿ ನೀಡಲು ಅವಕಾಶವಿದೆ.
9. ಕನ್ನಡ ಮತ್ತು ಪ್ರಾದೇಶಿಕ ಭಾಷೆ ಚಿತ್ರದ ಚಿತ್ರೀಕರಣ ಶುಲ್ಕ ರಿಯಾಯಿತಿ.

ಆ) 908 ಚಲನ ಚಿತ್ರಗಳಿಗೆ 1042.37 ಲಕ್ಷ ರೂ.ಗಳ ಸಹಾಯಧನ ಪಾವತಿ ಮಾಡಲಾಗಿದೆ. 24ಚಿತ್ರಗಳಿಗೆ 62.00ಲಕ್ಷ ರೂ.ಗಳ ಸಹಾಯಧನ ಮಂಜೂರಾಗಬೇಕಾಗಿದೆ.

ಇ) ಕನ್ನಡ ಚಲನ ಚಿತ್ರಗಳನ್ನು ಚಿತ್ರಮಂದಿರದವರು ವರ್ಷದಲ್ಲಿ 12 ವಾರಗಳ ಕಾಲ ಕಡ್ಡಾಯವಾಗಿ ಪ್ರದರ್ಶಿಸುವ ಬಗ್ಗೆ ದಿನಾಂಕ 25-2-1987ರಲ್ಲಿ ನಿರ್ಬಂಧ ವಿಧಿಸಲಾಯಿತು. ಉಚ್ಚ ನ್ಯಾಯಾಲಯವು ಸದರಿ ನಿಯಮವನ್ನು ರದ್ದುಗೊಳಿಸುವಂತೆ ಆದೇಶ ಹೊರಡಿಸಿತು.

ಡಬ್ಬಿಂಗ್ ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುತ್ತಿಲ್ಲ.

ಈ) ಕೇಂದ್ರೀಯ ಚಲನಚಿತ್ರ ದೃಢೀಕರಣ ಮಂಡಳಿಯವರು ದೃಢೀಕರಣಪತ್ರ ನೀಡದಂತೆ ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಯ ಚಲನಚಿತ್ರಗಳಿಗೆ ಮಾತ್ರ ಸಹಾಯಧನ ನೀಡಲಾಗುತ್ತಿದೆ.

**ನೆಲಮಂಗಲ ತಾಲ್ಲೂಕಿನ ಶಿವಗಂಗೆ ಕ್ಷೇತ್ರವನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರ ಶನಿದೇವರ ಕ್ಷೇತ್ರವನ್ನು ಪ್ರವಾಸಿಗಳ ಕ್ಷೇತ್ರವಾಗಿ ಮಾಡುವುದು**

998 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1) ನೆಲಮಂಗಲ ತಾಲ್ಲೂಕಿನ ಸೊಂಪುರ ಹೋಬಳಿಯಲ್ಲಿರುವ ಶಿವಗಂಗೆ ಕ್ಷೇತ್ರವನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಶನಿದೇವರ ಕ್ಷೇತ್ರವನ್ನು ಪ್ರವಾಸಿಗಳ ಕೇಂದ್ರವನ್ನಾಗಿ ಮಾಡಬೇಕೆಂದು ಶಾಸಕರಿಂದ ಸರ್ಕಾರಕ್ಕೆ ಮನವಿ ಪತ್ರ ಬಂದಿದೆಯೇ?*

*2) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

1) ಬಂದಿದೆ.